# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292

Email: aeecescrkn@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.


ಸಂಖ್ಯೆ:-ಸಕಾನಿಇಂ/ಸ.ಇಂ/ಆರ್‌ಕೆನ/ಉವಿ/ಎಫ್ /2017-18/ 449-50 ದಿನಾಂಕ:- 28/4/18

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ಸೋಮರಾಜು, ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 21.11.2017 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ ಸುರೇಂದ್ರ ಆರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಮಕೃಷ್ಣನಗರ ಉಪ ವಿಭಾಗ.
2. ಶ್ರೀಮತಿ ದಿವ್ಯ.ಸಿ.ಎನ್, ಸಹಾಯಕ ಇಂಜಿನಿಯರ್(ವಿ),ರಾಮಕೃಷ್ಣನಗರ ಉಪ ವಿಭಾಗ.
3. ಶ್ರೀಯುತ ಮುಹೀದ್ ಅಹಮದ್, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
4. ಶ್ರೀಯುತ ಸುರೇಶ್, ಸಹಾಯಕ ಇಂಜಿನಿಯರ್(ವಿ), ಜಯಪುರ ಶಾಖೆ.
5. ಶ್ರೀಯುತ ಗುರುಸ್ವಾಮಿ, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
6. ಶ್ರೀಯುತ ತಿಮ್ಮರಾಜು, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.

**ಹಾಜರಿದ್ದ ಗ್ರಾಹಕರು:-**

1. ಶ್ರೀ ಬಸವರಾಜು, ಗುಜ್ಜೇಗೌಡನಪುರ.
2. ಶ್ರೀ ಸಿದ್ದರಾಜು, ದೇವಗಳ್ಳಿ.
3. ಶ್ರೀ ವೆಂಕಟೇಶ್, ಗೋಪಾಲಪುರ.
4. ಶ್ರೀ ಕೆ.ವಿ.ರಾಮನಾಥ್, ಶ್ರೀರಾಂಪುರ.
5. ಶ್ರೀ ಪ್ರಶಾಂತ್,
6. ಶ್ರೀ ವೆಂಕಟೇಶ್, ಆರ್.ಕೆ.ನಗರ.
7. ಶ್ರೀ ಅಶ್ವಥನಾರಾಯಣ, ಸಲಹೆಗಾರರು, ಮೈಸೂರು.

ಮೊದಲನೆಯದಾಗಿ ಹಿಂದಿನ ಸಭೆಯಲ್ಲಿ ಚರ್ಚೆ ನಡೆದಿದ್ದ ವಿಷಯಗಳ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ, ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| | ಶ್ರೀ ಅಶ್ವಥ್ ನಾರಾಯಣ 9449833792 | • ಖಾತಾ ವರ್ಗಾವಣೆ ಹಾಗೂ ಹೊಸ ವಿದ್ಯುತ್ ಸಂಪರ್ಕ ಪಡೆಯುವಾಗ ನೀಡಬೇಕಾಗಿರುವ ದಾಖಲಾತಿಗಳ | • ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಕೆ.ಇ.ಆರ್.ಸಿ ನಿಯಮಗಳ ಪ್ರಕಾರ ಖಾತಾ ವರ್ಗಾವಣೆ |

| | | | |
|---|---|---|---|
| | | ವಿವರವನ್ನು ಸಾರ್ವಜನಿಕ ಫಲಕದಲ್ಲಿ ಹಾಕಿದರೆ ಗ್ರಾಹಕರಿಗೆ ಅನುಕೂಲವಾಗುವುದೆಂದು ತಿಳಿಸಿದರು. | ಹಾಗೂ ಹೊಸ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರು ನೀಡಬೇಕಾಗಿರುವ ದಾಖಲಾತಿಗಳನ್ನು ಸೂಚನಾ ಫಲಕದಲ್ಲಿ ಹಾಕುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 2. | ಶ್ರೀ ಬಸವರಾಜು ,<br>ಗುಜ್ಜೇಗೌಡನಪುರ<br>9945558149 | • ಗ್ರಾಮಗಳಲ್ಲಿ ಕಟ್ಟಡ ನಿರ್ಮಾಣಗೊಂಡಾಗ ಕಟ್ಟಡಕ್ಕೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಖಡಿತಗೊಳಿಸಿ ಶಾಶ್ವತ ನಿಲುಗಡೆ ಮಾಡುವುದರಿಂದ ಅಂತಹ ಜಾಗಕ್ಕೆ ಗ್ರಾಮ ಪಂಚಾಯಿತಿವತಿಯಿಂದ ಈ ಸ್ವತ್ತು ಪಡೆಯಲು ಹೋದಾಗ ನೂತನ ವಿದ್ಯುಚ್ಛಕ್ತಿ ಬಿಲ್ಲನ್ನು ನೀಡಬೇಕಾಗಿದ್ದು, ಚಾವಿಸನಿನಿ ಕಛೇರಿಯಲ್ಲಿ ವಿಚಾರಿಸಿದಾಗ ಶಾಶ್ವತ ನಿಲುಗಡೆ ಆಗಿರುವ ಸ್ಥಾವರಗಳಿಗೆ ಇತ್ತೀಚಿನ ವಿದ್ಯುಚ್ಛಕ್ತಿ ಬಿಲ್ಲನ್ನು ನೀಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದ ಗ್ರಾಮ ಪಂಚಾಯಿತಿ ವತಿಯಿಂದ ಈ ಸ್ವತ್ತು ಪಡೆಯಲು ಕಷ್ಟವಾಗಿರುತ್ತದೆ ಎಂದು ತಿಳಿಸಿದರು.<br>• ಕೆಲವು ಬಾರಿ ವಿದ್ಯುತ್ ವಿತರಣಾ ಕೇಂದ್ರದಿಂದ ಯಾವುದೇ ಮಾಹಿತಿ ಇಲ್ಲದೆ ಐ.ಪಿ ಫೀಡರ್‌ಗಳಿಗೆ ತ ಫೇಸ್ ನೀಡಬೇಕಾಗಿರುವ ಹೊತ್ತಿನಲ್ಲಿ ನೀಡದೇ ಬೇರೆ ಹೊತ್ತಿನಲ್ಲಿ ನೀಡುವುದರಿಂದ ರೈತರಿಗೆ ಕಷ್ಟವಾಗುತ್ತಿರುವುದಾಗಿ ತಿಳಿಸಿದರು. | • ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಕೆ.ಇ.ಆರ್.ಸಿ ನಿಯಮಾವಳಿ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು.<br>• ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಉರ್ಜಾ-ಮಿತ್ರ ಎಂಬ ಯೋಜನೆ (Concept) ಇದ್ದು, ಇದಕ್ಕೆ ಗ್ರಾಹಕರ ದೂರವಾಣಿ ಸಂಖ್ಯೆಯನ್ನು ಪಡೆಯುತ್ತಿದ್ದು, ಫೀಡರ್‌ಗಳಲ್ಲಿ ವಿದ್ಯುತ್ ಸರಬರಾಜು ನೀಡುವ ಬಗೆಯಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ಸಂಬಂಧಪಟ್ಟ ಗ್ರಾಹಕರಿಗೆ ದೂರವಾಣಿ ಸಂದೇಶವನ್ನು ನೀಡುವುದಾಗಿ ತಿಳಿಸಿದರು. |
| 3. | ಶ್ರೀ.ಕೆ.ವಿ.ರಾಮನಾಥ್, ಶ್ರೀರಾಂಪುರ<br>9448979349 | ಮೊದಲನೆಯದಾಗಿ ಲೋಡ್ ಶೆಡ್ಡಿಂಗ್ ಬಗ್ಗೆ ಸಂದೇಶಗಳು ಬರುತ್ತಿದ್ದು, ಇದರಿಂದ ಗ್ರಾಹಕರಿಗೆ ಅನುಕೂಲವಾಗುತ್ತಿರುವುದಾಗಿ ಹಾಗೂ ರಾತ್ರಿಯ ವೇಳೆ ಏನಾದರೂ ದೂರುಗಳು ಇದ್ದಲ್ಲಿ ತಕ್ಷಣವೇ ಬಗೆ ಹರಿಸುತ್ತಿರುವುದಕ್ಕೆ ಅಭಿನಂದನೆಯನ್ನು ತಿಳಿಸಿದರು.<br>• ಆರ್.ಎ.ಪಿ.ಡಿ.ಆರ್.ಪಿ ಯೋಜನೆಯಡಿಯಲ್ಲಿ ಎಸ್.ಬಿ.ಎಂ ಪಾರ್ಕನ ಬಳಿ ವಿದ್ಯುತ್ ಕಂಬಗಳನ್ನು ತೆಗೆದು ಅಲ್ಲಿಯೇ ರಸ್ತೆಯ ಬದಿಯಲ್ಲಿ ಹಾಕಿರುವುದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.<br>• ಶ್ರೀರಾಂಪುರ 2ನೇ ಹಂತ #1140, 2ನೇ ಕ್ರಾಸ್, ಗಣೇಶ್ ಎಂಬುವವರು ಮನೆಯ ಹತ್ತಿರ ವಿದ್ಯುತ್ ಕಂಬವು ಶಿಥಿಲಗೊಂಡಿದ್ದು, ಇದನ್ನು ಬದಲಾಯಿಸಿಕೊಡುವಂತೆ ಕೋರಿದರು. | • ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಕ್ಷಣವೇ ಅಲ್ಲಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು.<br>• ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |

| | | |
|---|---|---|
| ಶ್ರೀ ವೆಂಕಟೇಶ್, ಗೋಪಾಲಪುರ | • ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೆಲವು ಕುಡಿಯುವ ನೀರು ಸ್ಥಾವರಗಳು ಬತ್ತು ಹೋಗಿದ್ದರೂ ಸಹ ಇಂತಹ ಸ್ಥಾವರಗಳಿಗೆ ಎಫ್.ಸಿ ಬರುತ್ತಿರುವುದರಿಂದ ಗ್ರಾಮ ಪಂಚಾಯಿತಿ ESROW ಮೊತ್ತ ಪೋಲಾಗುತ್ತಿದ್ದು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಕೋರಿದರು. | • ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಕ್ಷಣವೇ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿ ಬಳಕೆಯಲ್ಲಿ ಇಲ್ಲದೇ ಇರುವ ಸ್ಥಾವರಗಳ ಮಾಹಿತಿಯನ್ನು ಪಡೆದು ಅಂತಹ ಸ್ಥಾವರಗಳನ್ನು ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಮಧ್ಯಾಹ್ನ 1:00 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Vidh 2/11

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.